ಇಲಾಖೆ / ವಿಷಯ : DEPARTMENT / SUBJECT: ಚುನಾವಣೆ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ ದಿನಾಂಕ : DATE : 16/2/20

# ಡಿಸಿಎಂ ಸವದಿ ಮೇಲ್ಮನೆ ಆಯ್ಕೆ ಸುಗಮ

## ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಅನಿಲ್ ಕುಮಾರ್ ಅಖಾಡದಿಂದ ಹಿಂದಕ್ಕೆ

• **ಕನ್ನಡಪ್ರಭವಾರ್ತೆ** ಬೆಂಗಳೂರು

ವಿಧಾನಸಭೆಯಿಂದ ವಿಧಾನಪರಿಷತ್‌ನ ಒಂದು ಸ್ಥಾನಕ್ಕೆ ನಡೆಯುವ ಉಪಚುನಾವಣೆಗೆ ಜೆಡಿಎಸ್ ಬೆಂಬಲಿತ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ಅನಿಲ್ ಕುಮಾರ್ ನಿರೀಕ್ಷೆಯಂತೆ ಅಖಾಡದಿಂದ ಹಿಂದೆ ಸರಿದಿದ್ದು, ಉಪ ಮುಖ್ಯಮಂತ್ರಿ ಲಕ್ಷ್ಮಣ್ ಸವದಿ ಗೆಲುವಿನ ಹಾದಿ ಸುಗಮವಾಗಿದೆ.



ಉಪ ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಗಳ ಹೆಸರು ಅಂತಿಮಗೊಂಡಿರುವ ಹಿನ್ನೆಲೆಯಲ್ಲಿ ಈ ಕುರಿತು ವಿಧಾನಸಭಾ ಸಚಿವಾಲಯ ಅಧಿಸೂಚನೆ ಪ್ರಕಟಿಸಿ ಚುನಾವಣಾ ಆಯೋಗಕ್ಕೂ ಮಾಹಿತಿ ನೀಡಿದೆ. ಹೀಗಾಗಿ ಚುನಾವಣೆಗೆ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ. ಅನಿಲ್ ಕುಮಾರ್ ಚುನಾವಣಾ ಕಣದಿಂದ ಹಿಂದೆ ಸರಿದಿದ್ದರೂ ಸೋಮವಾರ ಚುನಾವಣೆ ನಡೆಯಲಿದೆ.

ಜೆಡಿಎಸ್ ಬೆಂಬಲಿತ ಅಭ್ಯರ್ಥಿಗೆ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲ ನೀಡುವುದಿಲ್ಲ ಎಂದು ಮಾಜಿ ಸಿಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ದಿನೇಶ್ ಗುಂಡೂರಾವ್ ಸ್ಪಷ್ಟವಾಗಿ ಹೇಳಿದ್ದಾರೆ. ಕಾಂಗ್ರೆಸ್ ಬೆಂಬಲ ಇಲ್ಲದ ಕಾರಣಕ್ಕಾಗಿ ಅನಿಲ್ ಕಣದಿಂದ ಹಿಂದೆ ಸರಿವ ತೀರ್ಮಾನ ಕೈಗೊಂಡಿದ್ದಾರೆ.

ಚುನಾವಣೆ ನಡೆಸಲು ವಿಧಾನಸಭೆಯ 106 ಸಮಿತಿ ಕೊಠಡಿಯಲ್ಲಿ ಸಕಲ ಸಿದ್ಧತೆಯನ್ನು ಕೈಗೊಳ್ಳಲಾಗಿದೆ. ಕೊನೆಯ ಹಂತದಲ್ಲಿ ಅಖಾಡದಿಂದ ಹಿಂದೆ ಸರಿದರೂ ಚುನಾವಣೆಯನ್ನು ನಡೆಸಬೇಕು. ಹೀಗಾಗಿ ಸೋಮವಾರ 9 ಗಂಟೆಯಿಂದ ಸಂಜೆ 4 ಗಂಟೆವರೆಗೆ ಮತದಾನ, 5 ಗಂಟೆಗೆ ಮತ ಎಣಿಕೆ ನಡೆಯಲಿದೆ.

ಸುದ್ದಿಗಾರರ ಜತೆ ಮಾತನಾಡಿದ ಅನಿಲ್, ಯಾರಿಗೂ ಮುಜುಗರವಾಗಬಾರದು ಎಂದು ಕಣದಿಂದ ಹಿಂದೆ ಸರಿಯುವ ನಿರ್ಧಾರಕ್ಕೆ ಬಂದಿದ್ದೇನೆ. ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರನ್ನು ಭೇಟಿ ಮಾಡಿ ಬೆಂಬಲ ಕೇಳಿದ್ದೆ. ಆದರೆ, ಬೆಂಬಲ ದೊರೆಯಲಿಲ್ಲ ಎಂದರು.

**ಡಿಸಿಎಂ ಲಕ್ಷ್ಮಣ್ ನಿರಾಳ:** ಅನಿಲ್ ಕುಮಾರ್ ನಿರ್ಧಾರದಿಂದ, ಬಿಜೆಪಿಯಿಂದಲೇ ಅಡ್ಡಮತದಾನದ ಆತಂಕಕ್ಕೊಳಗಾಗಿದ್ದ ಡಿಸಿಎಂ ಲಕ್ಷ್ಮಣ್ ಸವದಿ ಈಗ ನಿರಾಳರಾಗಿದ್ದಾರೆ. ವಿಧಾನಸಭೆ ಚುನಾವಣೆಯಲ್ಲಿ ಸೋಲನುಭವಿಸಿದರೂ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದಾಗ ಪಕ್ಷದ ಹೈಕಮಾಂಡ್ ಲಕ್ಷ್ಮಣ ಸವದಿಗೆ ಸಚಿವ ಸ್ಥಾನ ನೀಡುವುದು ಮಾತ್ರವಲ್ಲದೇ, ಉಪಮುಖ್ಯಮಂತ್ರಿ ಗಾದಿಯನ್ನು ಸಹ ನೀಡಿದೆ. ಫೆಬ್ರವರಿ ಮೂರನೇ ವಾರದೊಳಗೆ ಸವದಿ ಮೇಲ್ಮನೆಗೆ ಆಯ್ಕೆ ಆಗಬೇಕಾದ ಅನಿವಾರ್ಯತೆ ಇದೆ.

## ಕಾಂಗ್ರೆಸ್ಸಿಗರೇ ಬೇಡ ಅಂದ್ರೆ ನಾನೇನು ಮಾಡ್ಲಿ: ರೇವಣ್ಣ

ಹಾಸನ: ರಾಜ್ಯ ವಿಧಾನ ಪರಿಷತ್ತಿಗೆ ಕಾಂಗ್ರೆಸ್ ಮುಖಂಡರ ಸಮ್ಮತದಿಂದಲೇ ಅನಿಲ್ ಕುಮಾರ್‌ರನ್ನು ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕೆ ಇಳಿಸಲಾಗಿತ್ತು. ಆಗ ಸಮ್ಮತಿಸಿದ ಪಕ್ಷದವರೇ ಈಗ ಬೇಡ ಅಂದರೆ ನಾನೇನು ಮಾಡಲು ಆಗದು ಎಂದು ಶಾಸಕ ಎಚ್.ಡಿ.ರೇವಣ್ಣ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ನಗರದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಅನಿಲ್ ಸ್ಪರ್ಧೆಗೆ ಕೆಪಿಸಿಸಿ ಅಧ್ಯಕ್ಷರು ಮಾತ್ರವಲ್ಲದೇ ಅನೇಕ ಮುಖಂಡರು ಒಪ್ಪಿದ್ದರು. ಅನಂತರ ಕೆಲ ಮುಖಂಡರು ಬೆಂಬಲ ನೀಡುವಿಕೆಯಿಂದ ಹಿಂದೆ ಸರಿದಿದ್ದಾರೆ. ಕೋಮುವಾದಿಗಳನ್ನು ದೂರ ಇಡಬೇಕೆಂಬ ಉದ್ದೇಶದಿಂದ ಪಕ್ಷೇತರ ಅಭ್ಯರ್ಥಿಯಿಂದ ಅರ್ಜಿ ಸಲ್ಲಿಸಲಾಗಿತ್ತು. ಆದರೆ, ಕೋಮುವಾದಿ ಪಕ್ಷದ ವಿರುದ್ಧ ಹೋರಾಡಬೇಕೆನ್ನುವ ಪಕ್ಷವೇ ಬೆಂಬಲಿಸುತ್ತಿಲ್ಲ ಎಂದು ಟೀಕಿಸಿದರು.